**ಸಾಕ್ಷಿಗೆ ದಿನಾಂಕ 07.05.2025 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಅರ್ಜಿದಾರರ ಪರ ಶ್ರೀ ಬಿಸಿಪಿ ವಕೀಲರಿಂದಃ**

**1.** ನಾನು ಈ ಪ್ರಕರಣದಲ್ಲಿ, ಮೆಡಿಕಲ್ ರೆಕಾರ್ಡ್ ಅಫಿಸರ್ ಆಗಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯಕ್ಕೆ ಸಂಬಂಧಿಸಿದಂತೆ, ನಾನು ಈ ದಿನ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಅದರಲ್ಲಿರುವ ಅಂಶಗಳು ಸತ್ಯವಾಗಿರುತ್ತವೆ. ಅದನ್ನು ನಾನು ಓದಿ ತಿಳಿದುಕೊಂಡು ಸಹಿಮಾಡಿರುತ್ತೇನೆ.

**2.** ನಾನು ಈ ಪ್ರಕರಣದಲ್ಲಿ ತೆಗೆದುಕೊಂಡಿರುವ ನಿಲುವಿಗೆ ಸಂಬಂಧಿಸಿದಂತೆ ಈ ಕೆಳಕಂಡ ದಾಖಲೆಗಳನ್ನು ಹಾಜರು ಮಾಡುತ್ತಿದ್ದೇನೆ. ಸಾಕ್ಷಿಹಾಜರು ಮಾಡಿದ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನಿಕರಿಸಲಾಗಿರುತ್ತದೆ.:

| | |
|---|---|
| ನಿ.ಪಿ 19 | ಅಧಿಕಾರ ಪತ್ರ |
| ನಿ.ಪಿ 20 | ಎಂ.ಎಲ್.ಸಿ ಎಕ್ಟ್ರಾಕ್ಟ್ ನ ದೃಡೀಕೃತ ದಾಖಲೆ |
| ನಿ.ಪಿ 21 | ಪೊಲೀಸ್ ಇನ್‌ಟಿಮೇಷನ್ ದೃಡೀಕೃತ ದಾಖಲೆ |
| ನಿ.ಪಿ 22 | ಕೇಸ್ ಸೀಟ್‌ಗಳು |
| ನಿ.ಪಿ 23 | ಎಕ್ಸಾರೆ |

**3.** ನನ್ನ ಮುಖ್ಯ ವಿಚಾರಣೆ ಸಾಕ್ಷ್ಯ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ ಪ್ರಕರಣದಲ್ಲಿ ಕೋರಿರುವ ಪರಿಹಾರವನ್ನು ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲುಃ 2ನೇ ಎದುರುದಾರರ ಪರ ಎನ್. ಎಂ.ಪಿ. ವಕೀಲರಿಂದಃ**

ಅರ್ಜಿದಾರರನ್ನು ಆಸ್ಪತ್ರೆಗೆ ಮಂಜು ಎನ್ನುವವರು ಕರೆದುಕೊಂಡು ಬಂದು ದಾಖಲಿಸಿರುತ್ತಾರೆ ಎಂದು ದಾಖಲೆಯಲ್ಲಿ ಕಂಡು ಬರುತ್ತದೆ. ಆಸ್ಪತ್ರೆಯಲ್ಲಿ ಗಾಯದ ಹಿನ್ನೆಲೆಯ ಬಗ್ಗೆ ಹೇಳಿಕೆಯನ್ನು ಯಾರು ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ-20 ಮತ್ತು 21 ರಲ್ಲಿ ಅಪಘಾತ ಪಡಿಸಿದ ವಾಹನ ನೋಂದಣಿ ಸಂಖ್ಯೆ ನಮೂದು ಇಲ್ಲ ಎಂದರೆ ಸರಿ. ಅರ್ಜಿದಾರರು ಆಸ್ಪತ್ರೆಗೆ ದಾಖಲಾಗುವ ಸವುಯದಲ್ಲಿ ಪ್ರಜ್ಞೆಹೀನಾಗಿದ್ದರು. ಅರ್ಜಿದಾರರು ಸಹಾಯ ಮಾಡುವ ಉದ್ದೇಶದಿಂದ ನಿಪಿ-20 ರಿಂದ 23 ದಾಖಲೆಗಳನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

1ನೇ ಎದುರುದಾರರು ಗೈರು ಹಾಜರಾಗಿರುತ್ತಾರೆ. ಪಾಟೀಸವಾಲು ಇಲ್ಲವೆಂದು ತಗೆದುಕೊಳ್ಳಲಾಯಿತು.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**